## ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ:7** **ಅಕ್ಟೋಬರ್ ಮಾಹೆ** **ಪ್ರಥಮ ಭಾಷೆ ಕನ್ನಡ**

### ಗದ್ಯ ಭಾಗ : ಪರಿಸರ ಸಮತೋಲನ

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಅಕ್ಟೋಬರ್ 1ನೇ ವಾರ | * ವಿಷಯಾನುಸಾರ ಸಹಜ ಚರ್ಚೆ, ಸಂವಾದ ವಿವರಣೆಗಳೊಂದಿಗೆ ಮಾತನಾಡುವುದು. | ಚಟುವಟಿಕೆ 1:<br>ಕಾಡಿನ ನಾಶ, ಅತಿವೃಷ್ಟಿ–ಅನಾವೃಷ್ಟಿಯ ಕಾರಣಗಳು, ಮನುಷ್ಯನ ದುರಾಸೆಯಿಂದ ಪ್ರಾಣಿಗಳ ನಾಶ–ಇವುಗಳ ಕುರಿತ ಚಿತ್ರಗಳನ್ನು ಮಕ್ಕಳ ಮುಂದೆ ಪ್ರದರ್ಶಿಸುವುದು. ನಂತರ ಚಿತ್ರಗಳು ಹೇಳುವ ಸಂದೇಶಗಳ ಬಗ್ಗೆ ಮಕ್ಕಳನ್ನು ಗುಂಪು ಮಾಡಿ ಚರ್ಚಿಸಲು ತಿಳಿಸುವರು. | ಅವಲೋಕನ<br>ಅವಲೋಕನ ಪಟ್ಟಿ |
| | | | ಚಟುವಟಿಕೆ 2:<br>ಜನಸಂಖ್ಯಾ ಏರಿಕೆ, ನಗರೀಕರಣ, ಕೈಗಾರಿಕೀಕರಣ ವಿಷಯಗಳ ಬಗ್ಗೆ ಸಂವಾದವನ್ನು ವಿದ್ಯಾರ್ಥಿಗಳ ಗುಂಪುಗಳಿಗೆ ಏರ್ಪಡಿಸುವುದು. | ಮೌಖಿಕ ಪ್ರಶ್ನೆಗಳು |
| | | | ಚಟುವಟಿಕೆ 3:<br>ಮೇಲಿನ ವಿಷಯಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಿ ಅತ್ಯುತ್ತಮ ಪ್ರಬಂಧಗಳನ್ನು ವಿಜೇತರು ಪ್ರಸ್ತುತಪಡಿಸಲು ತಿಳಿಸುವುದು | ಅವಲೋಕನ<br>ಅವಲೋಕನ ಪಟ್ಟಿ |

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಪರಿಸರ ಸಮತೋಲನ ಗದ್ಯಭಾಗವನ್ನು ಸೂಕ್ತ ಸ್ವರಭಾರ, ಏರಿಳಿತದೊಂದಿಗೆ ಓದುವುದು.<br>* ಲೇಖಕರ ಪರಿಚಯ ಮಾಡಿಕೊಳ್ಳುವರು .<br>* ಪದಗಳ ಅರ್ಥ ತಿಳಿಯುವರು ಆಚ್ಛಾದನ, ಕ್ರೋಮೋಜೋಮು, ಪಾಶ್ಚಾತ್ಯ, ಕಣ್ಣು ಕಪ್ಪಡಿ<br>* ಪಠ್ಯಭಾಗದ ಕುರಿತ ಕಲಿಕಾ ಚಟುವಟಿಕೆಗಳು<br>* ಗಾದೆ ಮಾತುಗಳನ್ನು ತಿಳಿಯುತ್ತಾರೆ .<br>* ಪದಗಳಿಗೆ ಅರ್ಥಪೂರ್ಣ ವಾಕ್ಯ ರಚನೆ ಮಾಡುತ್ತಾರೆ . | ಶಿಕ್ಷಕರ ಓದು, ಮಕ್ಕಳ ಓದು ಮತ್ತು ಮೌನ ಓದು<br>ಡಾ.ಕೃಷ್ಣಾನಂದ ಕಾಮತ್ ರ ಭಾವಚಿತ್ರ ಸಂಗ್ರಹಿಸಿ ಅವರ ಬಗ್ಗೆ ವಿವರವನ್ನು ಬರೆಯಿರಿ<br>ಶಬ್ದಕೋಶ ಬಳಸಿ ಆಚ್ಛಾದನ, ಕ್ರೋಮೋಜೋಮು, ಪಾಶ್ಚಾತ್ಯ, ಕಣ್ಣು ಕಪ್ಪಡಿ ಪದಗಳ ಅರ್ಥಗಳನ್ನು ಬರೆಯಲು ತಿಳಿಸುತ್ತಾರೆ<br>ಅಭ್ಯಾಸ ಚಟುವಟಿಕೆಗಳು – ಅಭ್ಯಾಸ ಪುಟ ಸಂಖ್ಯೆ 40 ರ ಲಿಖಿತ ಪ್ರಶ್ನೆಗಳಿಗೆ ಉತ್ತರ ಬರೆಯಲು ತಿಳಿಸುವುದು<br>ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿ:<br>1. ದೂರದ ಬೆಟ್ಟ ...........................<br>2. ಹಿತ್ತಲ ಗಿಡ..................<br>3. ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ...................<br>ನಿರ್ಮಾಣ, ಶತಮಾನ, ಮನಸೋಲು, ಹಿಂಬಾಲಿಸು | ಅವಲೋಕನ<br>ಅವಲೋಕನ<br>ಶಬ್ದಕೋಶದ ಬಳಕೆಯ ಬಗ್ಗೆ ಅವಲೋಕನ<br>ಲಿಖಿತ ಪ್ರಶ್ನೆಗಳು<br>ಅಭ್ಯಾಸ ಹಾಳೆ<br>ಅಭ್ಯಾಸ ಹಾಳೆ |

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 2 | ಅಕ್ಟೋಬರ್ 2ನೇ ವಾರ | * ಭಾಷಾಭ್ಯಾಸ ಚಟುವಟಿಕೆಗಳನ್ನು ಮಾಡುವರು .<br><br>* ಕನ್ನಡ ಸಂಧಿಗಳ ಬಗ್ಗೆ ತಿಳಿಯುವರು .<br><br>* ಸಂಸ್ಕೃತ ಸಂಧಿಗಳ ಬಗ್ಗೆ ತಿಳಿಯುವರು .<br><br>* ಸಂಧಿಗಳ ಬಗ್ಗೆ ಗುಂಪು ಚಟುವಟಿಕೆ | ಭಾಷಾಭ್ಯಾಸ ಚಟುವಟಿಕೆಗಳು (ಪುಟ ಸಂಖ್ಯೆ 40 ಮತ್ತು 41)<br><br>ಸಂಧಿಗಳು : ಲೋಪ. ಆಗಮ ಮತ್ತು ಆದೇಶ ಸಂಧಿಗಳ ಬಗ್ಗೆ ಪುಟ ಸಂಖ್ಯೆ 42 ರ ಚಟುವಟಿಕೆಗಳು<br><br>ಪುಟ ಸಂಖ್ಯೆ 43, 44, 45, 46, 47 ರಲ್ಲಿನ ಸಂಸ್ಕೃತ ಸಂಧಿಗಳು ಮತ್ತು ಅದರ ವಿಧಗಳ ಬಗ್ಗೆ ಶಿಕ್ಷಕರು ವಿವರವಾಗಿ ತಿಳಿಸಿ ಕೊಡುವರು .<br><br>ಯೋಜನೆ : ಮಕ್ಕಳನ್ನು ಗುಂಪು ಮಾಡಿ ಸಂಧಿಗಳಿಗೆ ಸಂಬಂಧಿಸಿದಂತೆ ಸಂಧಿಗಳು, ವಿಧಗಳು, ಕನ್ನಡ ಸಂಧಿಗಳು, ಸಂಸ್ಕೃತ ಸಂಧಿಗಳ ಹೆಸರು, ಉದಾಹರಣೆಗಳೊಂದಿಗೆ ಬರೆದು ಚಾರ್ಟ್ ತಯಾರಿಸುವುದು . | ಅಭ್ಯಾಸ ಹಾಳೆ<br>ಅವಲೋಕನ ಪಟ್ಟಿ<br><br>ಅಭ್ಯಾಸ ಹಾಳೆ<br><br>ಅಭ್ಯಾಸ ಹಾಳೆ<br><br>ಅವಲೋಕನ<br>ಅವಲೋಕನ ಪಟ್ಟಿ |

ಸೂಚನೆ:

1. ಮೇಲೆ ನೀಡಿರುವ ಕಲಿಕಾ ಚಟುವಟಿಕೆಗಳು ಕೇವಲ ಸಲಹಾತ್ಮಕವಾಗಿದ್ದು ಶಿಕ್ಷಕರು ಇವುಗಳಿಗಿಂತಲೂ ಪರಿಣಾಮಕಾರಿ ಚಟುವಟಿಕೆಗಳನ್ನು ಆಯೋಜಿಸಲು ಸ್ವತಂತ್ರರು .
2. ಸುಮೇರು ಕಲಿಕಾ ಚಟುವಟಿಕೆಗಳನ್ನು ಶಿಕ್ಷಕರು ಬಳಸಿಕೊಳ್ಳಬಹುದು .
3. ಸಂವೇದ ಪಾಠದ ಚಟುವಟಿಕೆಗಳನ್ನು ಶಿಕ್ಷಕರು ಬಳಸಿಕೊಳ್ಳುವುದು.

**ಪರ್ಯಾಯ ಶೈಕ್ಷಣಿಕ ಯೋಜನೆ – 2021–2022**

**ತರಗತಿ : 7** **ಪದ್ಯ ಭಾಗ : ಭಾಗ್ಯದ ಬಳೆಗಾರ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 3 | ಅಕ್ಟೋಬರ್ 3ನೇ ವಾರ | * ಜಾನಪದದ ಅರ್ಥ ತಿಳಿಯುವರು. | – ಪದಗಳು ಹಳ್ಳಿಯ ಸಾಮಾನ್ಯ ಜನರ ನಡುವೆ ಹುಟ್ಟಿ ಬಾಯಿಂದ ಬಾಯಿಗೆ ಹರಿದು ಬಂದಿರುವ ಪದಗಳ ಪಟ್ಟಿಯೇ ಜಾನಪದ ಎಂಬುದನ್ನು ಮಕ್ಕಳಿಗೆ ಅರ್ಥೈಸುವುದು.<br>– ಕೆಲವು ಸ್ಥಳೀಯ ನೃತ್ಯ ಪ್ರಕಾರಗಳ ಚಿತ್ರಗಳನ್ನು ತೋರಿಸಿ ಅವುಗಳನ್ನು ಹೆಸರಿಸಲು ತಿಳಿಸುವುದು<br>ಉದಾ: ಯಕ್ಷಗಾನ, ಭರತನಾಟ್ಯ, ಕಂಸಾಳೆ, ಡೊಳ್ಳು ಕುಣಿತ, ಕೋಲಾಟ ಇತ್ಯಾದಿ<br>– ಕೆಲವು ಜಾನಪದ ಗೀತೆಗಳನ್ನು ಮಕ್ಕಳಿಗೆ ಹೇಳಿಕೊಟ್ಟು ಹಾಡಿಸುವುದು.<br>ಉದಾ: 1. ಧರಣಿ ಮಂಡಲ ಮಧ್ಯದೊಳಗೆ<br>2. ನೋಡವಳಂದಾವ, ಮೊಗ್ಗಿನ ಮಾಲೆ ಚೆಂದಾವ<br>– ಶಿಕ್ಷಕರು ಭಾಗ್ಯದ ಬಳೆಗಾರ ಗೇತೆಯನ್ನು ಸುಶ್ರಾವ್ಯವಾಗಿ ಹಾಡುವರು. ನಂತರ ವಿದ್ಯಾರ್ಥಿಗಳಿಂದ ರಾಗವಾಗಿ ಹಾಡಿಸುವುದು<br>– ವಿದ್ಯಾರ್ಥಿಗಳಿಗೆ ಈ ಗೀತೆಯ ವೀಡಿಯೋವನ್ನು ನೋಡಲು ವ್ಯವಸ್ಥೆ ಮಾಡುವುದು | ಅವಲೋಕನ ಪಟ್ಟಿ |

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಪದ್ಯದ ಭಾವಾರ್ಥವನ್ನು ಅರ್ಥೈಸಿಕೊಳ್ಳುವರು<br><br><br><br><br><br><br><br><br><br>* ನಾಣ್ಣುಡಿ, ನುಡಿಗಟ್ಟು, ಗಾದೆಗಳನ್ನು ಬಳಸಿ ಮಾತನಾಡುವರು | – ಪದ್ಯದ ಭಾವಾರ್ಥವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸುವುದು.<br>ಚಟುವಟಿಕೆ 1:<br>ವಿದ್ಯಾರ್ಥಿಗಳಿಬ್ಬರೂ ಈ ಗೀತೆಯನ್ನು ಅಭಿನಯ ಮಾಡುತ್ತಾ ರಾಗವಾಗಿ ಹಾಡಲು ಮಾರ್ಗದರ್ಶನವನ್ನು ನೀಡುವುದು<br>– ಪದ್ಯದ ಭಾವಾರ್ಥವನ್ನು ಸಂಭಾಷಣಾ ರೂಪದಲ್ಲಿ ಬರೆಯಲು ತಿಳಿಸುವುದು<br><br><br>ಚಟುವಟಿಕೆ 2:<br>ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದೊಂದು ನುಡಿಗಟ್ಟನ್ನು ಬರೆದಿರುವ ಕಾರ್ಡ್‌ನ್ನು ನೀಡುವುದು. ಪ್ರತೀ ಮಗುವು ಆ ನುಡಿಗಟ್ಟಿನ ಅರ್ಥವನ್ನು ತಿಳಿದುಕೊಂಡು ಅದನ್ನು ವಾಕ್ಯದಲ್ಲಿ ಪ್ರಯೋಗಿಸಿ ಮಾತನಾಡುವಂತೆ ಪ್ರೋತ್ಸಾಹಿಸಿ ಶಿಕ್ಷಕರು ಅನುಕೂಲಿಸುವುದು.<br>ಉದಾ: ಎತ್ತಿದ ಕೈ (ಪ್ರವೀಣ)<br>ರವಿವರ್ಮ ಚಿತ್ರ ಬಿಡಿಸುವುದರಲ್ಲಿ ಎತ್ತಿದ ಕೈ | <br><br><br><br><br>ಅವಲೋಕನ ಪಟ್ಟಿ<br><br><br><br><br><br>ಅಭ್ಯಾಸ ಹಾಳೆ |

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಅಪೂರ್ಣ ಗಾದೆಗಳನ್ನು ಪೂರ್ಣಗೊಳಿಸುವರು . | ಚಟುವಟಿಕೆ 3:<br>ವಿದ್ಯಾರ್ಥಿಗಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸುವುದು.<br>ಅಪೂರ್ಣ ಗಾದೆಗಳನ್ನು ಬರೆದಿರುವ ಕಾರ್ಡ್‌ಗಳನ್ನು ವಿದ್ಯಾರ್ಥಿಗಳ ಒಂದು ಗುಂಪಿಗೆ ನೀಡುವುದು.<br>ಇನ್ನೊಂದು ಗುಂಪಿನ ವಿದ್ಯಾರ್ಥಿಗಳು ಅದನ್ನು ಪೂರ್ಣಗೊಳಿಸಲು ಮಾರ್ಗದರ್ಶನ ನೀಡುವುದು.<br>ಉದಾ:<br>1. ಮಿಂಚಿ ಹೋದ ಕಾಲಕ್ಕೆ__________<br>2. ಕುಂಬಾರನಿಗೆ ವರುಷ __________ | ಅಭ್ಯಾಸ ಹಾಳೆ |
| | | * ಗಾದೆಗಳನ್ನು ವಿಸ್ತರಿಸಿ ಬರೆದು ಹೇಳುವರು . | – ವಿದ್ಯಾರ್ಥಿಗಳಿಗೆ ಕೆಲವು ಗಾದೆ ಮಾತುಗಳನ್ನು ನೀಡುವುದು. ಅವರು ಅದನ್ನು ಇತರೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ, ಸೂಕ್ತ ರೀತಿಯಲ್ಲಿ ಅವುಗಳನ್ನು ವಿಸ್ತರಿಸಿ ಬರೆದು ತರಗತಿಯಲ್ಲಿ ಪ್ರಸ್ತುತ ಪಡಿಸಲು ಅನುಕೂಲಿಸುವುದು | ಅಭ್ಯಾಸ ಹಾಳೆ |

ಸೂಚನೆ:

1. ಮೇಲೆ ನೀಡಿರುವ ಕಲಿಕಾ ಚಟುವಟಿಕೆಗಳು ಕೇವಲ ಸಲಹಾತ್ಮಕವಾಗಿದ್ದು ಶಿಕ್ಷಕರು ಇವುಗಳಿಗಿಂತಲೂ ಪರಿಣಾಮಕಾರಿ ಚಟುವಟಿಕೆಗಳನ್ನು ಆಯೋಜಿಸಲು ಸ್ವತಂತ್ರರು .
2. ಸುಮೇರು ಕಲಿಕಾ ಚಟುವಟಿಕೆಗಳನ್ನು ಶಿಕ್ಷಕರು ಬಳಸಿಕೊಳ್ಳಬಹುದು ಜೊತೆಗೆ ದೀಕ್ಷಾ ಆಪ್ ನಲ್ಲಿ ದೊರೆಯುವ ಮೌಲ್ಯಮಾಪನ ಸಾಧನಗಳನ್ನು ಬಳಸಿಕೊಳ್ಳಬಹುದು .
3. ಸಂವೇದ ಪಾಠದ ಚಟುವಟಿಕೆಗಳನ್ನು ಶಿಕ್ಷಕರು ಬಳಸಿಕೊಳ್ಳುವುದು .ಇದರ ಲಿಂಕ್ https://youtu.be/mEJRiuOLCYc

## ಅಭ್ಯಾಸ ಹಾಳೆ – 1

ತರಗತಿ : 7 ಪರಿಸರ ಸಮತೋಲನ

1. ಶಿಕ್ಷಕರು ತಾವು ಸಂಗ್ರಹಿಸಿ ತಂದ ಚಿತ್ರಗಳಾದ ಕಾಡಿನ ನಾಶದ ದುಷ್ಪರಿಣಾಮಗಳು, ಕಾಡು ಪ್ರಾಣಿ–ಪಕ್ಷಿಗಳ ಮಾರಣ ಹೋಮ, ನದಿಗಳ ಬತ್ತುವಿಕೆ, ಅತಿವೃಷ್ಟಿ –ಅನಾವೃಷ್ಟಿ ವಿಷಯಗಳ ಕುರಿತ ಚಿತ್ರಗಳನ್ನು ಮಕ್ಕಳ ಮುಂದೆ ಪ್ರದರ್ಶಿಸುವುದು. ನಂತರ ವಿಷಯಾನುಸಾರ ಚರ್ಚೆಯನ್ನು ಗುಂಪಿನಲ್ಲಿ ಏರ್ಪಡಿಸುವರು.

   ಉದಾ : ಕಾಡಿನ ನಾಶದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಚರ್ಚಿಸಲು ತಿಳಿಸಿ. ಪ್ರತಿ ಗುಂಪುಗಳು ಚರ್ಚಿಸಿದ ಪ್ರಮುಖಾಂಶಗಳನ್ನು ತರಗತಿಯಲ್ಲಿ ಮಂಡಿಸಿ.

2. ಕೆಳಕಂಡ ವಿಷಯಗಳ ಬಗ್ಗೆ ಸಂವಾದ ಏರ್ಪಡಿಸಿರಿ.

   ಅ. ಜನಸಂಖ್ಯಾ ಏರಿಕೆಯಿಂದಾಗುವ ದುಷ್ಪರಿಣಾಮಗಳು

   ಆ. ನಗರೀಕರಣ, ಕೈಗಾರಿಕೀಕರಣ

3. ಪ್ರಬಂಧ ಬರೆಯಿರಿ (10–15 ವಾಕ್ಯಗಳು)

   ಕಾಡುಗಳ ನಾಶ – ಮನು ಕುಲಕ್ಕೆ ಕಂಟಕ

ಅಭ್ಯಾಸ ಹಾಳೆ – 2

ತರಗತಿ : 7 ಪರಿಸರ ಸಮತೋಲನ

1. ಡಾ.ಕೃಷ್ಣಾನಂದ ಕಾಮತ್ ಅವರ ಕೃತಿಗಳ ಹೆಸರುಗಳನ್ನು ಪಟ್ಟಿ ಮಾಡಿ.

2. ಶಬ್ದಕೋಶ ಬಳಸಿ ಕೆಳಗಿನ ಪದಗಳ ಅರ್ಥ ಬರೆಯಿರಿ.

   ಆಚ್ಛಾದನ, ಪಾಶ್ಚಾತ್ಯ, ಕಣ್ಣು ಕಪ್ಪಡಿ, ಚಿಗರೆ

3. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

   ಅ. ಸಂತತಿ ನಿರ್ಮಿತಿಯಲ್ಲಿ ಅತಿ ಮಂದಗತಿ ಎಂದು ಯಾವ ಪ್ರಾಣಿಯನ್ನು ಪರಿಗಣಿಸಲಾಗಿದೆ?

   ಆ. ಪ್ರತೀ ಪ್ರಾಣಿಯ ವ್ಯಕ್ತಿತ್ವವನ್ನು ನಿಯಂತ್ರಿಸುವ ಅಂಶ ಯಾವುದು?

   ಇ. ಪ್ರಾಣಿ–ಪ್ರಾಣಿಗಳ ನಡುವೆ ಯಾವುದಕ್ಕಾಗಿ ಸ್ಪರ್ಧೆ ನಡೆಯುತ್ತದೆ?

   ಈ. ಪ್ರಾಣಿಗಳಲ್ಲಿಯೇ ದೊಡ್ಡ ಪ್ರಾಣಿ ಯಾವುದು?

4. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

   ಅ. ವನ್ಯಜೀವಿ ಸಂರಕ್ಷಣೆಯನ್ನು ಹೇಗೆ ಮಾಡುತ್ತಿದ್ದಾರೆ?

   ಆ. ಸರೋವರ, ಕೆರೆ ಮತ್ತು ಹೊಂಡಗಳು ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ ಏಕೆ?

   ಇ. ಯೋಜನೆ ತಯಾರಿಸುವ ವಿಜ್ಞಾನಿಗಳು ಯಾವ ರೀತಿಯ ಮುನ್ನೆಚ್ಚರಿಕೆ ವಹಿಸಬೇಕು?

   ಈ. ಕಪ್ಪೆಗಳನ್ನು ಮಾನವ ಏಕೆ ಕೊಲ್ಲುತ್ತಿದ್ದಾನೆ?

5. ಕೊಟ್ಟಿರುವ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ:

   ಅ. ಮೊಸಳೆ, ಹಾವುಗಳ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.

   ಆ. ಕಾಡನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳೇನು?

## ಅಭ್ಯಾಸ ಹಾಳೆ – 3

ತರಗತಿ : 7 ಪರಿಸರ ಸಮತೋಲನ

ಅ. ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿ:

1. ದೂರದ ಬೆಟ್ಟ ______________________________

2. ಹಿತ್ತಲ ಗಿಡ ______________________________

3. ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ______________________________

4. ಕೂತು ಉಣ್ಣುವವನಿಗೆ ____________________________

5. ಹಸು ಕಪ್ಪಾದರೆ ______________________________

ಆ. ಕೆಳಗಿನ ಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸಿ.

ನಿರ್ಮಾಣ, ಶತಮಾನ, ಮನಸೋಲು, ನಿರ್ನಾಮವಾಗು, ನಾಶವಾಗು

ಇ. ಚಟುವಟಿಕೆ:

1. ಕಾಡು ನಾಶವಾಗುವುದರಿಂದ ಉಂಟಾಗುವ ತೊಂದರೆಗಳನ್ನು ಪಟ್ಟಿ ಮಾಡಿ

2. ಗಿಡ–ಮರ, ಸೂರ್ಯೋದಯ, ಪ್ರಾಣಿ ಪಕ್ಷಿಗಳು ಇರುವಂತೆ ಕಲ್ಪಿಸಿಕೊಂಡು ಪ್ರಕೃತಿ ಚಿತ್ರವನ್ನು ಬರೆ.

## ಅಭ್ಯಾಸ ಹಾಳೆ – 4

ತರಗತಿ : 7 ಪರಿಸರ ಸಮತೋಲನ

---

* ಈ ಕೆಳಗಿನವುಗಳ ಬಗ್ಗೆ 2–3 ವಾಕ್ಯಗಳಲ್ಲಿ ತಿಳಿಸಿ:

1. ಸಂಧಿ

2. ಸಂಧಿ ಕಾರ್ಯ

3. ಕನ್ನಡ ಸಂಧಿಗಳು

* ಕೆಳಗಿನ ಪದಗಳಲ್ಲಿರುವ ಸಂಧಿಯನ್ನು ಗುರುತಿಸಿ ಹೆಸರಿಸಿ:

1. ನೀನೇಕೆ

2. ಊರಲ್ಲಿ

3. ಮೊಟ್ಟೆಯಿಡು

* ಕೆಳಗಿನ ಸಂಧಿಗಳಿಗೆ ಎರಡೆರಡು ಉದಾಹರಣೆಗಳನ್ನು ನೀಡಿ:

1. ಸವರ್ಣ ದೀರ್ಘ ಸಂಧಿ

2. ಗುಣ ಸಂಧಿ

3. ವೃದ್ಧಿ ಸಂಧಿ

4. ಯಣ್ ಸಂಧಿ

* ಕೆಳಗಿನ ಸಂಧಿಗಳಿಗೆ ಎರಡೆರಡು ಉದಾಹರಣೆಗಳನ್ನು ನೀಡಿ:

1. ಜಶ್ತ್ವ ಸಂಧಿ

2. ಶ್ಚುತ್ವ ಸಂಧಿ

3. ಅನುನಾಸಿಕ ಸಂಧಿ

ಅಭ್ಯಾಸ ಹಾಳೆ – 1

ತರಗತಿ : 7 ಪದ್ಯ : ಭಾಗ್ಯದ ಬಳೆಗಾರ

1. ಈ ನುಡಿಗಟ್ಟುಗಳನ್ನು ಅವುಗಳ ಅರ್ಥದೊಂದಿಗೆ ಹೊಂದಿಸಿ ಬರೆಯಿರಿ:

| | |
|---|---|
| 1. ನೀರಿಗೆ ಹಾಕು | ಸ್ಥಿರವಾಗಿರು |
| 2. ಬೇರೂರು | ಶ್ರಮಪಡು |
| 3. ಮೈಬಗ್ಗಿಸು | ತಪ್ಪು ಕೆಲಸ ಮಾಡು |
| 4. ಎತ್ತಿದ ಕೈ | ವ್ಯರ್ಥ ಮಾಡು |
| 5. ಅಡ್ಡದಾರಿ ಹಿಡಿ | ಪ್ರವೀಣ |

2. ಕೆಳಗೆ ನೀಡಿರುವ ನುಡಿಗಟ್ಟುಗಳನ್ನು ಬಳಸಿ ವಾಕ್ಯ ರಚಿಸಿ

1. ತಲೆದೂಗು
2. ಟೋಪಿ ಹಾಕು
3. ಮುಖ ಅರಳು
4. ಕಿವಿ ಕಚ್ಚು

3. ಸರಿಯಾದ ಉತ್ತವನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿರಿ:

1. ಮುತ್ತೈದೆ ಪದದ ಅರ್ಥ________________

   1. ವಿಧವೆ 2. ಮದುವೆಯಾದ ಹೆಣ್ಣು 3. ಮಗಳು 4. ಕುಮಾರಿ

2.ಭಾಗ್ಯದ ಬಳೆಗಾರ ಪದ್ಯವು ಸಾಹಿತ್ಯದ ಈ ಬಗೆಯದ್ದಾಗಿದೆ______________

   1. ಭಾವಗೀತೆ 2. ಜನಪದ ಗೀತೆ 3. ಲಾವಣಿ 4. ಕಥನ ಗೀತೆ

3. "ಕೊಂಡ್ಹೋಗೋ" ಪದದ ಗ್ರಾಂಥಿಕ ರೂಪ ______________

   1. ಕೊಂಡು ಓಗೋ 2. ಕೊಂಡೋ ಹೋಗೋ 3. ಕೊಂಡು ಹೋಗು 4. ಕೊಂಡೋ–ಗೋ

4. 'ಕಿಡಿ ಕಾರು' ನುಡಿಗಟ್ಟಿನ ಅರ್ಥ __________

   1. ಕಿಡಿ ಹಚ್ಚು 2. ಸುಡು 3. ಕಿಡಿಕಾರು 4. ಸಿಟ್ಟಿಗೇಳು

## ಅಭ್ಯಾಸ ಹಾಳೆ – 2

ತರಗತಿ : 7 ಪದ್ಯ : ಭಾಗ್ಯದ ಬಳೆಗಾರ

1. ಈ ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿ:

    1. ಕೈ ಕೆಸರಾದರೆ ______________________

    2. ಬೆಕ್ಕಿಗೆ ಚೆಲ್ಲಾಟ ________________________

    3. ಕುಂಬಾರನಿಗೆ ವರುಷ __________________________

    4. ಮಿಂಚಿ ಹೋದ ಕಾಲಕ್ಕೆ ____________________

    5. ಅಡಿಕೆಗೆ ಹೋದ ಮಾನ ____________________

2. ಈ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ:

    1. ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ

    2. ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ

3.'ಭಾಗ್ಯದ ಬಳೆಗಾರ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

ಅಭ್ಯಾಸ ಹಾಳೆ – 3

ತರಗತಿ : 7 ಪದ್ಯ : ಭಾಗ್ಯದ ಬಳೆಗಾರ

---

* ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಬಳೆಗಾರ ಎಲ್ಲಿಗೆ ಹೋಗಿ ಬರಬೇಕೆಂದು ಹೆಣ್ಣು ಹೇಳುತ್ತಾಳೆ?

2. ತಾಯಿಯ ಮನೆ ಯಾವ ರೀತಿ ಇದೆ?

3. ಚಪ್ಪರದ ನಡುವೆ ತಾಯಿ ಯಾವ ಆಟ ಆಡುತ್ತಾಳೆ?

4. ಹಡೆದವ್ವನಿಗೆ ಯಾವ ಬಣ್ಣದ ಬಳೆ ಎಂದರೆ ಆಸೆ?

5. ತವರಿನ ದಾರಿಯಲ್ಲಿ ಎಡ ಬಲಕ್ಕಿರುವ ಮರಗಳು ಯಾವುವು?

6. ತವರಿನಲ್ಲಿರುವ ಪ್ರಾಣಿ ಪಕ್ಷಿ ಯಾವುವು?

*** ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ:**

1. ತವರು ಮನೆಗೆ ಹೋಗಲು ಗುರುತುಗಳೇನು?

2. ಹಡೆದವ್ವನ ಗುರುತನ್ನು ಗರತಿ ಹೇಗೆ ಹೇಳಿದ್ದಾಳೆ?